# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್**

ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

### ಭಾಗ ೧೬

## ಮಧ್ಯಪಾಶ್ಚಾತ್ಯ ಅಮೆರಿಕೆಯ ಪ್ರವಾಸ *(ಮುಂದುವರಿದುದು)*

**ಡೆ** ಮೊಯ್ನೆಸ್ ನಗರದಲ್ಲಿ ಸ್ವಾಮೀಜಿ ಪ್ರವಚನಗಳನ್ನು ನೀಡುತ್ತಿದ್ದಾರೆ. ಇಡೀ ನಗರದ ಜನತೆ ಪ್ರವಚನಗಳಿಂದ ಆಕರ್ಷಿತರಾಗಿದ್ದಾರೆ. ಈ ಬಗ್ಗೆ ಐಯೋವಾ ಸ್ಟೇಟ್ ರಿಜಿಸ್ಟರ್ ಎಂಬ ಪತ್ರಿಕೆಯ ನವೆಂಬರ್ ೨೮, ೧೮೯೩ನೆಯ ಸಂಚಿಕೆಯಲ್ಲಿ ಒಂದು ವರದಿಯು ಪ್ರಕಟವಾಯಿತು. ಇದರ ಸಾರಾಂಶ ಹೀಗಿದೆ:

''ಡೆ ಮೊಯ್ನೆಸ್ ನಗರದ ಜನತೆಯು ಸ್ವಾಮಿ ವಿವೇಕಾನಂದರ ದರ್ಶನವನ್ನು ಪಡೆದುಕೊಂಡಿದ್ದಾರೆ. ಅವರು ಪ್ರಸಿದ್ಧ ಹಿಂದೂ ಸಂನ್ಯಾಸಿಗಳಾಗಿದ್ದಾರೆ. ಅವರು ಶಿಕಾಗೋ ನಗರದ ಸರ್ವಧರ್ಮ ಸಮ್ಮೇಳನದ ಕೇಂದ್ರಬಿಂದುವಾಗಿದ್ದರು. ಅವರು ತಮಗೂ ಮತ್ತು ತಮ್ಮ ದೇಶದ ಜನಕ್ಕೂ ಅಪಾರ ಗೌರವವನ್ನು ತಂದುಕೊಟ್ಟಿದ್ದಾರೆ. ಇವರನ್ನು ಈ ನಗರಕ್ಕೆ ಪರಿಚಯಿಸಿದವರು ಡಾ. ಬ್ರೀಡೆನ್ ಅವರು. ವಿವೇಕಾನಂದರ ಸಂದೇಶವು ಸಾಗರದಾಚೆಗಿನ ಸಂದೇಶ. ಆದರೆ ಅವರು ಹೇಳುವಂತೆ, ಎಲ್ಲ ಧರ್ಮಗಳ ಮೂಲತತ್ತ್ವಗಳೂ ಸಮಾನವಾಗಿವೆ. ಎಲ್ಲ ಧರ್ಮಗಳಲ್ಲಿಯೂ ಒಳ್ಳೆಯ ತತ್ತ್ವವೇ ಅಡಗಿದೆ. ಸ್ವಾಮಿ ವಿವೇಕಾನಂದರು ಇದನ್ನು ಶಕ್ತಿಯುತವಾಗಿ ತಮ್ಮ ಭಾಷಣಗಳಲ್ಲಿ ಪ್ರತಿಪಾದಿಸುತ್ತಾರೆ. ವಿವೇಕಾನಂದರು ರಾಜಕುಮಾರನಂತೆ ಕಂಗೊಳಿಸುತ್ತಾರೆ. ಬಹಳ ಸುಂದರವಾದ ಮೈಕಟ್ಟು ಅವರದು; ಆಕರ್ಷಕವಾದ ವ್ಯಕ್ತಿತ್ವ; ತಮ್ಮ ದೇಶೀಯ ಉಡುಪಿನಲ್ಲಿ ಅವರು ಹೊಳಪಿನಿಂದ ಕಾಣುತ್ತಾರೆ.

''ಸ್ವಾಮಿ ವಿವೇಕಾನಂದರು, ಹಿಂದೂಗಳು ಮೃದುಸ್ವಭಾವದವರು; ಇದೇ ಅವರ ಹೆಚ್ಚುಗಾರಿಕೆ ಎಂದು ಪ್ರತಿಪಾದಿಸುತ್ತಾರೆ. ಸಂನ್ಯಾಸಿಯಾದ ತಾವು ಯಾವ ಜಾತಿಗೂ ಸೇರಿದವರಲ್ಲ. ಸಂನ್ಯಾಸಿಯು ಹಣವನ್ನು ಮುಟ್ಟುವುದಿಲ್ಲ. ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಉಪದೇಶವನ್ನು ಮಾಡುತ್ತ ಹೋಗುತ್ತಾನೆ. ಈ ದೇಶಕ್ಕೆ ತಾವು ಬಂದಿರುವುದು ಬಡವರಿಗಾಗಿ ಭಾರತದಲ್ಲಿ ಒಂದು ಶಾಲೆಯನ್ನು ತೆರೆಯಲು ಧನಸಹಾಯವನ್ನು ಪಡೆಯಲು ಎಂದು ವಿವೇಕಾನಂದರು ಹೇಳಿದರು.

''ಹಿಂದೂಧರ್ಮವು ಭಾರತದ ಅಧಃಪತನಕ್ಕೆ ಕಾರಣವಲ್ಲ. ಹೀಗೆಂದಾದರೆ, ಕ್ರೈಸ್ತಧರ್ಮವೇ ಪಾಶ್ಚಾತ್ಯ ನಾಗರಿಕತೆಯ ಎಲ್ಲ ದೋಷಗಳಿಗೂ ಕಾರಣ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಈಗ ಆವಶ್ಯಕವಾಗಿರುವುದು ಪರಸ್ಪರ ಸಹಾನುಭೂತಿ. ಸ್ವಾಮಿ ವಿವೇಕಾನಂದರು ಪರಿಶುದ್ಧ ಇಂಗ್ಲಿಷ್ ಭಾಷೆಯನ್ನು ಉಪಯೋಗಿಸುತ್ತಾರೆ. ಅವರು ಕೊಲ್ಕತಾ ನಗರದ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣವನ್ನು ಪಡೆದುಕೊಂಡಿದ್ದಾರೆ.''

ಸ್ವಾಮಿ ವಿವೇಕಾನಂದರು ನವೆಂಬರ್ ೨೮ರ ಸಂಜೆ ಪುನರ್ಜನ್ಮದ ಬಗ್ಗೆ ಸೆಂಟ್ರಲ್ ಚರ್ಚ್ ಆಫ್ ಕ್ರೈಸ್ಟ್ ಎಂಬ ಸಭಾಂಗಣದಲ್ಲಿ ನೆರೆದ ಸಭಿಕರಿಗೆ ಪ್ರವಚನವನ್ನು ಮಾಡಿದರು. ಇದರ ವರದಿಯನ್ನು ನವೆಂಬರ್ ೨೯ರ ಪತ್ರಿಕೆಗಳಲ್ಲಿ ಕಾಣಬಹುದು. ಈ ಭಾಷಣದಲ್ಲಿ ಸ್ವಾಮೀಜಿ ಪುನರ್ಜನ್ಮದ ಸಿದ್ಧಾಂತವು ನೂತನ ಸೃಷ್ಟಿತತ್ತ್ವವನ್ನು ಪ್ರತಿಪಾದಿಸುತ್ತದೆ ಎಂದು ಹೇಳುತ್ತಾರೆ. ಬ್ರಹ್ಮಾಂಡವು ಯಾವತ್ತೂ ಭಗವಂತನಲ್ಲಿ ನಿರಂತರವಾಗಿ ಇದ್ದೇ ಇತ್ತು.

ಈ ಮಧ್ಯೆ ಪಶ್ಚಿಮ ದಿಕ್ಕಿನ ಇನ್ನಷ್ಟು ನಗರಗಳಲ್ಲಿ ನಡೆಯಬೇಕಾಗಿದ್ದ ಉಪನ್ಯಾಸಗಳ ಕಾರ್ಯಕ್ರಮ ರದ್ದಾಗಿತ್ತು. ಹೀಗಾಗಿ ಸ್ವಾಮೀಜಿ ಡೆಸ್ ಮೊಯ್ನೆಸ್ ನಗರದಲ್ಲಿ ಎರಡು ದಿನಗಳ ಕಾಲ ಹೆಚ್ಚಾಗಿ ಉಳಿದುಕೊಂಡರು. ಇದರಿಂದ ಆ ನಗರದ ಜನತೆಗೆ ಮತ್ತಷ್ಟು ಸಂತೋಷವಾಯಿತು. ನವೆಂಬರ್ ೨೯ರಂದು ಅವರು ಯಾವುದೇ ಭಾಷಣಗಳನ್ನು ನೀಡಲಿಲ್ಲ. ಇದಕ್ಕೆ ಬದಲಾಗಿ, ನಗರ ವೀಕ್ಷಣೆಗೆ ತೆರಳಿದರು. ಅಲ್ಲಿನ ರಾಜ್ಯ ಐತಿಹಾಸಿಕ ವಿಭಾಗದ ವಸ್ತುಪ್ರದರ್ಶನವನ್ನು ಕೂಡ ನೋಡಿದರು. ಅಂದು ಸಂಜೆ, ಇಬ್ಬರು ಹೆಣ್ಣುಮಕ್ಕಳ ಬ್ಯಾಪ್ಟಿಸಮ್ ಅನ್ನು ಕೂಡ ಒಂದು ಚರ್ಚಿನಲ್ಲಿ ವೀಕ್ಷಿಸಿದರು. 'ಇದರ ಹಿಂದಿನ ಭಾವನೆಯು ಉದಾತ್ತವಾದುದು. ಇಡೀ ಪೂಜಾವಿಧಾನವು ಸುಂದರವಾಗಿತ್ತು. ಪಾದ್ರಿಯು ಪ್ರಾಮಾಣಿಕನಾಗಿದ್ದನು, ನಿಸ್ಪೃಹನಾಗಿದ್ದನು ಮತ್ತು ಶ್ರದ್ಧಾವಂತನಾಗಿದ್ದನು. ಹೀಗಾಗಿ ಸಮಾರಂಭವು ಕಳೆಯಿಂದ ಕೂಡಿತ್ತು' ಎಂದು ಸ್ವಾಮೀಜಿ ಉದ್ಗರಿಸಿದರು. ಅಂದು ನಗರದ ಬುದ್ಧಿಜೀವಿಗಳ ಒಕ್ಕೂಟವೊಂದು ಜರುಗಿತು. ಅಲ್ಲಿ ಸ್ವಾಮಿ ವಿವೇಕಾನಂದರು ಭಾರತದಲ್ಲಿ ಕ್ರೈಸ್ತಪಾದ್ರಿಗಳು ನಡೆಸುತ್ತಿರುವ ಪ್ರಚಾರಕಾರ್ಯದ ಬಗ್ಗೆ ಆಡಿದ ಮಾತುಗಳ ಬಗ್ಗೆ ಚರ್ಚಿಸಲಾಯಿತು. ಸ್ವಾಮೀಜಿ ತಮ್ಮ ಭಾಷಣದಲ್ಲಿ ಹೇಳಿದ್ದರು, ಭಾರತೀಯರಿಗೆ ಯಾವ ನೂತನ ಧರ್ಮದ ಆವಶ್ಯಕತೆಯೂ ಇಲ್ಲ ; ಅವರಿಗೆ ಬೇಕಾದುದು ಪ್ರಾಯೋಗಿಕ ಶಿಕ್ಷಣ; ಇದರಿಂದ ಭಾರತವನ್ನು ಆಕ್ರಮಿಸಿರುವ ಬ್ರಿಟಿಷರ ಜೊತೆಗೆ ಅವರು ಸರಿಸಮವಾಗಬಲ್ಲರು ಎಂದು.

ಗುರುವಾರ, ನವೆಂಬರ್ ೩೦,೧೮೯೩ರಂದು ಸ್ವಾಮೀಜಿ 'ಭಾರತದ ಜನರ ಕಟ್ಟುಪಾಡುಗಳು' ಎಂಬ ವಿಷಯವಾಗಿ ಭಾಷಣ ಮಾಡಿದರು. ಹಲವಾರು ಪತ್ರಿಕೆಗಳು ಈ ಬಗ್ಗೆ ಜಾಹಿರಾತುಗಳನ್ನು ಪ್ರಕಟಿಸಿದವು. ಇದೇನೂ ಹೊಸ ಸಂಗತಿಯಲ್ಲ. ಸ್ವಾಮೀಜಿ ಈಗಾಗಲೇ ಲೆಕ್ಚರ್ ಬ್ಯೂರೋ ಒಂದರ ಜೊತೆಗೆ ಒಪ್ಪಂದವನ್ನು ಮಾಡಿಕೊಂಡಿದ್ದರು. ಹೀಗಾಗಿ ಆ ಸಂಸ್ಥೆಯವರು

ಭಿತ್ತಿಪತ್ರಗಳನ್ನು ಮತ್ತು ಜಾಹಿರಾತುಗಳನ್ನು ಪ್ರಕಟಿಸುತ್ತಿದ್ದರು. ಇಂಥ ಒಂದು ಪೋಸ್ಟರಿನ ಬಗ್ಗೆ ತಾನು ರಚಿಸಿದ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯಲ್ಲಿ ರೊಮಾ ರೋಲಾ ಹೀಗೆ ಬರೆಯುತ್ತಾನೆ: ''ನನಗೆ ಒಂದು ಜಾಹಿರಾತಿನ ಭಿತ್ತಿಪತ್ರವು ಸಿಕ್ಕಿದೆ. ಅದರಲ್ಲಿ ಸ್ವಾಮಿ ವಿವೇಕಾನಂದರ ಚಿತ್ರವನ್ನು ಬೃಹತ್ತಾಗಿ ಮುದ್ರಿಸಲಾಗಿದೆ. 'ವೇದಿಕೆಯ ಮೇಲಿನ ದಿಗ್ಗಜರಲ್ಲಿ ಒಬ್ಬರು' ಎಂದು ಅದರಲ್ಲಿ ಮುದ್ರಿಸಲಾಗಿದೆ. ಅದೇ ರೀತಿ ನಾಲ್ಕು ಮುಖ್ಯ ಅಂಶಗಳನ್ನು ಕೂಡ ನಮೂದಿಸಲಾಗಿದೆ : ೧. ದಿವ್ಯಾನುಭೂತಿಯ ಭಾಷಣಕಾರರು ೨. ತನ್ನ ಜನಾಂಗದ ಉತ್ಕೃಷ್ಟ ಆದರ್ಶವ್ಯಕ್ತಿ ೩. ಇಂಗ್ಲಿಷ್ ಭಾಷೆಯಲ್ಲಿ ಅಪ್ರತಿಮ ವಾಗ್ಮಿ ೪. ಜಾಗತಿಕ ಸರ್ವಧರ್ಮ ಸಮ್ಮೇಳನದ ಆಕರ್ಷಣೆ. ಈ ಘೋಷಣಾಪತ್ರವು ಸ್ವಾಮೀಜಿಯವರ ನೈತಿಕ ಮತ್ತು ದೈಹಿಕ ಘನತೆಗಳನ್ನು ಎತ್ತಿತೋರಿಸುತ್ತದೆ. ಅವರ ಮೈಕಟ್ಟು, ಅವರ ಒಟ್ಟಾರೆ ವ್ಯಕ್ತಿತ್ವ, ಅವರ ಎತ್ತರ, ಅವರ ಮೈ ಬಣ್ಣ ಮತ್ತು ಪೋಷಾಕು – ಇವೆಲ್ಲವನ್ನೂ ಅಲ್ಲಿ ಸೂಚಿಸಲಾಗಿದೆ. ಹಾಗೆಯೇ ಸ್ವಾಮೀಜಿಯವರನ್ನು ಕಂಡವರು, ಆಲಿಸಿದವರು ಮತ್ತು ಅವರೊಡನೆ ಒಡನಾಡಿದವರು – ಇವರೆಲ್ಲರ ಹೇಳಿಕೆಗಳನ್ನೂ ಇಲ್ಲಿ ಮುದ್ರಿಸಲಾಗಿದೆ.'' ಈ ರೀತಿ ಲೆಕ್ಚರ್ ಬ್ಯೂರೋ ಸಂಸ್ಥೆಯವರು ಪ್ರಚಾರಕಾರ್ಯದಲ್ಲಿ ಏನೇನನ್ನು ಮಾಡಬೇಕೋ ಆ ಎಲ್ಲ ವಿಧಾನಗಳನ್ನು ಕೂಡ ಅನುಸರಿಸುತ್ತಿದ್ದರು.

ಹೀಗಿದ್ದರೂ, ಸ್ವಾಮೀಜಿಯವರು ಡೆಸ್ ಮೊಯ್ನೆಸ್ ಪಟ್ಟಣದಲ್ಲಿ ತಮ್ಮ ಅಂತಿಮ ಭಾಷಣವನ್ನು ಮಾಡುವ ಹೊತ್ತಿಗೆ ಈ ಎಲ್ಲ ಪ್ರಚಾರವಿಧಾನಗಳು ಕೂಡ ಅನಾವಶ್ಯಕವಾಗಿದ್ದವು. ಈಗಾಗಲೇ ಸ್ವಾಮೀಜಿ ಈ ನಗರದಲ್ಲಿ ಹೆಸರು ಮಾಡಿದ್ದರು. ಎಲ್ಲ ಪತ್ರಿಕೆಗಳೂ ಅವರ ವ್ಯಕ್ತಿತ್ವವನ್ನು ಮತ್ತು ಭಾಷಣದ ವಿಷಯವನ್ನು ಮನಸಾರೆ ಹೊಗಳುತ್ತಿದ್ದವು. ಡೈಲಿ ನ್ಯೂಸ್ ತನ್ನ ನವೆಂಬರ್ ೨೯ನೆಯ ತಾರೀಖಿನಂದು ಮತ್ತು ಅಯೋವಾ ಸ್ಟೇಟ್ ರಿಜಿಸ್ಟರ್ ಪತ್ರಿಕೆ ಡಿಸೆಂಬರ್ ೩ ನೆಯ ತಾರೀಖಿನಂದು ಸ್ವಾಮೀಜಿಯವರ ಪ್ರವಚನದ ಬಗ್ಗೆ ಎರಡು ಲೇಖನಗಳನ್ನು ಪ್ರಕಟಿಸಿದವು.

ಇದರಲ್ಲಿ ಡೈಲಿ ನ್ಯೂಸ್ ಪತ್ರಿಕೆಯು ಜೀವನದ ಸಮಸ್ಯೆಗಳನ್ನು, ಯಾವತ್ತೂ ವ್ಯಸ್ತವಾಗಿರುವ, ಚಟುವಟಿಕೆಯಿಂದ ಕೂಡಿದ ಅಮೆರಿಕದ ಜನರಿಗಿಂತ, ವಿಭಿನ್ನ ದೃಷ್ಟಿಕೋನದಿಂದ ನೋಡುವ ಒಂದು ಪ್ರಾಮಾಣಿಕ ಅಭಿಪ್ರಾಯವನ್ನು ಸ್ವಾಮಿ ವಿವೇಕಾನಂದರ ಭಾಷಣದಲ್ಲಿ ಕಾಣುತ್ತೇವೆ ಎಂದು ಬರೆಯಿತು. ಅಯೋವಾ ಸ್ಟೇಟ್ ರಿಜಿಸ್ಟರ್ ಪತ್ರಿಕೆಯ ಲೇಖನದ ಸಾರಾಂಶ ಹೀಗಿದೆ:

''ಕ್ರೈಸ್ತಧರ್ಮದ ಕೆಲವು ದೋಷಗಳನ್ನು ಎತ್ತಿತೋರಿಸುವುದರಿಂದ ಆ ಧರ್ಮಕ್ಕೇನೂ ಹಾನಿ ಉಂಟಾಗುವುದಿಲ್ಲ. ಇದನ್ನೇ ಸ್ವಾಮಿ ವಿವೇಕಾನಂದರು ತಮ್ಮ ಭಾಷಣದಲ್ಲಿ ಮಾಡಿದ್ದು. ಡೆಸ್ ಮೊಯ್ನೆಸ್ ನಗರದಲ್ಲಿ ಅವರು ಬಹಳ ಫಲಪ್ರದವಾಗಿ ಕಾಲವನ್ನು ಕಳೆಯುತ್ತಿದ್ದಾರೆ. ನಗರದ ಗಣ್ಯವ್ಯಕ್ತಿಗಳ ಜೊತೆಗೆ ಧಾರ್ಮಿಕ ಮತ್ತು ತಾತ್ತ್ವಿಕ ಜಿಜ್ಞಾಸೆಯನ್ನು ನಡೆಸುತ್ತಿದ್ದಾರೆ. ಜನರು ಕೂಡ ಅವರನ್ನು ತೀವ್ರವಾಗಿ ಪ್ರಶ್ನಿಸುತ್ತಿದ್ದಾರೆ. ಸ್ವಾಮಿ ವಿವೇಕಾನಂದರು ಮಿಂಚಿನಂತೆ ಇವಕ್ಕೆಲ್ಲ ಉತ್ತರಗಳನ್ನು ನೀಡುತ್ತಿದ್ದಾರೆ. ಪ್ರಶ್ನೆಯನ್ನು ಕೇಳುವವರು ಭಾರತದ ಪ್ರಜ್ವಲ ಪಾಂಡಿತ್ಯದ ಎದುರಿನಲ್ಲಿ ಪೇಲವರಂತೆ ಕಂಡುಬರುತ್ತಿದ್ದಾರೆ. ವಿವೇಕಾನಂದರ ಮನಸ್ಸು ಸೂಕ್ಷ್ಮವಾದುದು; ಪ್ರತಿಭಾಶಾಲಿಯಾದುದು. ಅವರ ಪಾಂಡಿತ್ಯ ಅಗಾಧವಾದುದು; ಅವರು ಪಡೆದುಕೊಂಡ ಶಿಕ್ಷಣ ಅತ್ಯುತ್ತಮವಾದುದು. ಇದು ಕೆಲಸಮಯ ಕೇಳುಗರನ್ನು ಮುಗ್ಧಗೊಳಿಸುತ್ತದೆ. ಹಾಗೂ ಆಸಕ್ತಿಕರವಾದ ಅಧ್ಯಯನಕ್ಕೆ ಎಡೆ ಮಾಡಿಕೊಡುತ್ತದೆ. ಸ್ವಾಮಿ ವಿವೇಕಾನಂದರು ಯಾವುದೇ ನಿಂದೆಯ ಪದವನ್ನು ಆಡುವುದಿಲ್ಲ. ಅವರ ಸ್ವಭಾವವೇ ನಿಂದೆಯ ಮಾತುಗಳಿಗೆ ಅವಕಾಶ ಕೊಡುವುದಿಲ್ಲ. ಅವರನ್ನು ಬಲ್ಲವರು, ಅವರು ಬಹಳ ಸಭ್ಯವ್ಯಕ್ತಿಯೆಂದು, ಸರಳ ಸ್ವಭಾವದವರೆಂದು ಕಂಡುಕೊಳ್ಳುತ್ತಾರೆ. ತಮಗೆ ತೋರಿದ ದಯಾಳುತನಕ್ಕೆ ಅವರು ಯಾವಾಗಲೂ ಕೃತಜ್ಞರಾಗಿರುತ್ತಾರೆ. ವಿವೇಕಾನಂದರು ಮತ್ತು ಅವರ ಧ್ಯೇಯೋದ್ದೇಶಗಳು ಪ್ರತಿಯೊಬ್ಬ ನೈಜ ಕ್ರೈಸ್ತಧರ್ಮೀಯನ ಹೃದಯದಲ್ಲಿಯೂ ಅಗ್ರಸ್ಥಾನವನ್ನು ಪಡೆದುಕೊಳ್ಳುತ್ತವೆ.

''ಒಬ್ಬ ಮಹಿಳೆಯು ಕಾರ್ಯಕ್ರಮದ ಆಯೋಜಕರಾದ ಡಾ. ಬ್ರೀಡೆನ್ ಅವರಿಗೆ ಕ್ರೈಸ್ತಧರ್ಮವನ್ನು ಟೀಕಿಸದಂತೆ ಸ್ವಾಮಿ ವಿವೇಕಾನಂದರಿಗೆ ತಿಳಿಸುವಂತೆ ಕೇಳಿಕೊಂಡಳು. ಆದರೆ ಅವರು ಅದಕ್ಕೆ ಒಪ್ಪಲಿಲ್ಲ. ಪ್ರತಿಯೊಂದು ಧರ್ಮದ ಬಗ್ಗೆಯೂ ಮುಕ್ತವಾಗಿ ಚರ್ಚಿಸುವ ಅವಕಾಶ ಇರಬೇಕೆಂದು ಅವರ ಅಭಿಪ್ರಾಯ. ಸ್ವಾಮಿ ವಿವೇಕಾನಂದರಿಗೆ ತಮ್ಮ ಧರ್ಮದ ವಿಷಯದಲ್ಲಿ ಅದೆಷ್ಟೊಂದು ಆತ್ಮವಿಶ್ವಾಸವಿತ್ತು ಎಂದರೆ, ಅಮೆರಿಕದ ಎಲ್ಲ ಮತಾಂಧ ಕ್ರೈಸ್ತರನ್ನೂ ಒಮ್ಮೆಗೆ ಎದುರಿಸುವ ಎದೆಗಾರಿಕೆಯನ್ನು ಅವರು ತೋರ್ಪಡಿಸುತ್ತಿದ್ದರು. ಆದರೆ ಅವರು ಯಾರನ್ನಾಗಲಿ ಮತಾಂತರಗೊಳಿಸಲು ಅಮೆರಿಕೆಗೆ ಬಂದವರಲ್ಲ. ಯಾರನ್ನೂ ಧರ್ಮಾಂಧರೆಂದು ತುಚ್ಛವಾಗಿ ಅವರು ನೋಡುವವರಲ್ಲ. ಒಮ್ಮೆ ಅವರು ಉದ್ಗರಿಸಿದರು: 'ಹಿಂದೂಗಳಾದ ನಾವು ಎಂದಿಗೂ ನಿಮ್ಮಂತೆ ಮಂತ್ರವಾದಿನಿಯರನ್ನು ಜೀವಂತವಾಗಿ ಸುಡಲಿಲ್ಲ.' ಅವರು ಒಮ್ಮೊಮ್ಮೆ ಕತ್ತಿಯ ಮೊನೆಯಂತೆ ಹರಿತವಾಗಿ ಮಾತನಾಡುತ್ತಾರೆ. ಆದರೆ ಅದು ಒಬ್ಬ ಶಸ್ತ್ರಚಿಕಿತ್ಸಜ್ಞನ ಕತ್ತಿಯಂತೆ ಒಳ್ಳೆಯದನ್ನೇ ಉಂಟುಮಾಡುತ್ತದೆಯೇ ಹೊರತು, ಯುದ್ಧದ ಕತ್ತಿಯಂತೆ ವಿನಾಶವನ್ನು ಉಂಟುಮಾಡುವುದಿಲ್ಲ. ವಿವೇಕಾನಂದರು ಕ್ರೈಸ್ತಧರ್ಮದಲ್ಲಿನ ಅಂಕುಡೊಂಕುಗಳನ್ನು ಎತ್ತಿ ತೋರಿಸುವುದಕ್ಕೆ ಎಳ್ಳಷ್ಟೂ ಅಳುಕುತ್ತಿರಲಿಲ್ಲ. ಕ್ಷುಲ್ಲಕ ಮನಸ್ಸಿನ ನಾವು ಇವರ ಟೀಕೆಟಿಪ್ಪಣೆಗಳಿಂದ ಕಲಿತುಕೊಳ್ಳಬೇಕಾದುದು ಬೇಕಾದಷ್ಟು ಇದೆ; ತಿದ್ದುಕೊಳ್ಳಬೇಕಾದದ್ದು ಬಹಳವೇ ಇದೆ.

''ಸ್ವಾಮಿ ವಿವೇಕಾನಂದರು ಭಾರತದ ಬಗ್ಗೆ ನೈಜಚಿತ್ರಣವನ್ನು ನೀಡಿದರು. ಕೆಲವು ಕಳಪೆ ಪುಸ್ತಕಗಳನ್ನು ಓದಿ ನಾವು ಮಾಡಿಕೊಂಡಿದ್ದ ತಪ್ಪುಭಾವನೆಗಳನ್ನು ನಿವಾರಣೆಗೊಳಿಸಿದರು. ಅವರು ಸರ್ ಡಬ್ಲ್ಯು ವಿಲ್ಸನ್ ಹಂಟರ್ ಎಂಬಾತನು ಬರೆದ

‘A Short History of People of India’ ಎಂಬ ಗ್ರಂಥ ಮಾತ್ರವೇ ಇಂಗ್ಲಿಷಿನಲ್ಲಿ ಇರುವ ವಿಶ್ವಾಸಾರ್ಹ ಪುಸ್ತಕ ಎಂದು ತಿಳಿಸಿದರು. ಈ ಗ್ರಂಥದ ಮೂಲಕ ಭಾರತ, ಅದರ ಧರ್ಮ, ಹಿಂದೂ ಜನರ ಆಚರಣೆಗಳು — ಮುಂತಾದವನ್ನು ಸರಿಯಾಗಿ ತಿಳಿದುಕೊಳ್ಳಲು ಸಾಧ್ಯ ಎಂದು ಮನಗಾಣಿಸಿದರು.’’

ಸರಿಸುಮಾರು ಇದೇ ಸಮಯದಲ್ಲಿ ಸರ್ವಧರ್ಮ ಸಮ್ಮೇಳನದಲ್ಲಿ ಬ್ರಹ್ಮಸಮಾಜದ ಪ್ರತಿನಿಧಿಯಾಗಿದ್ದ, ಮುಂಬೈ ನಗರದ, ಬಿ.ಬಿ. ನಗರ್‌ಕರ್ ಅವರೂ ಕೂಡ ಡೆಸ್ ಮೊಯ್ನೆಸ್ ನಗರಕ್ಕೆ ಬಂದಿಳಿದಿದ್ದರು. ಅವರು ಕೂಡ ಪ್ರವಚನಗಳನ್ನು ನೀಡುವವರಿದ್ದರು. ಇವರು ಹಿಂದೊಮ್ಮೆ ಸ್ವಾಮೀಜಿಯವರ ನಿಂದಕರಲ್ಲಿ ಒಬ್ಬರಾಗಿದ್ದರು. ಹಾಗಿದ್ದರೂ ನಗರ್‌ಕರ್ ಅವರ ಬಗ್ಗೆ ಸ್ವಾಮೀಜಿ, ಈ ನಗರವನ್ನು ಬಿಟ್ಟು ತೆರಳುವ ಮುನ್ನ, ಪ್ರಶಂಸೆಯ ಮಾತುಗಳನ್ನೇ ಆಡಿದರು. ಇದನ್ನು ಐಯೋವಾ ಸ್ಟೇಟ್ ರಿಜಿಸ್ಟರ್ ಪತ್ರಿಕೆಯು ತನ್ನ ಡಿಸೆಂಬರ್ ೧,೧೮೯೩ರ ಸಂಚಿಕೆಯಲ್ಲಿ ಹೀಗೆ ವರದಿ ಮಾಡಿತು:

‘‘ಈ ನಗರವನ್ನು ಬಿಟ್ಟು ತೆರಳುವ ಮೊದಲು, ವಿವೇಕಾನಂದರು ಬ್ರಹ್ಮಸಮಾಜದ ಬಗ್ಗೆ ಬಹಳ ಪ್ರಶಂಸೆಯ ಮಾತುಗಳನ್ನು ಆಡಿದರು. ಭಾರತದಲ್ಲಿ ಈ ಸಂಸ್ಥೆಯು ಮಾಡುತ್ತಿರುವ ಕಾರ್ಯ, ಅದರಲ್ಲಿಯೂ ಮಹಿಳೆಯರ ಉದ್ಧಾರಕ್ಕಾಗಿ ನಡೆಸುತ್ತಿರುವ ಸೇವಾಯೋಜನೆಗಳನ್ನು ಅವರು ಕೊಂಡಾಡಿದರು. ಹಾಗೆಯೇ ಈ ದೇಶದಲ್ಲಿ ಅದರ ಪ್ರತಿನಿಧಿಯಾಗಿರುವ ನಗರ್‌ಕರ್ ಅವರ ಬಗ್ಗೆಯೂ ಮೆಚ್ಚುಗೆಯ ಮಾತುಗಳನ್ನು ಆಡಿದರು. ವಿವೇಕಾನಂದರು ಈ ನಗರದಲ್ಲಿ ಆರಂಭಿಸಿದ ಜೀವಕಳೆ ತುಂಬಿದ ಧಾರ್ಮಿಕ ಸಂವಾದವು ನಗರ್‌ಕರ್ ಅವರಿಗೆ ಮಾರ್ಗದರ್ಶಿಯಾಗಿದೆ. ಪೌರಸ್ತ್ಯ ದೇಶಗಳ ಬಗ್ಗೆ ಈ ನಗರದ ಜನತೆಯ ಆಸಕ್ತಿಯನ್ನು ಇದು ಕೆರಳಿಸಿದೆ.’’

ಸ್ವಾಮಿ ವಿವೇಕಾನಂದರಿಗೆ ಡೆಸ್ ಮೊಯ್ನೆಸ್ ನಗರದಲ್ಲಿ ಉತ್ತಮವಾದ ಪ್ರತಿಕ್ರಿಯೆ ಸಿಕ್ಕಿತು. ಇದರಿಂದ ಅವರು ಸಂತುಷ್ಟರಾಗಿರಬೇಕು. ಅವರು ಈ ನಗರದಲ್ಲಿ ಕಟ್ಟಕಡೆಯದಾಗಿ ನವೆಂಬರ್ ೩೦ ರಂದು ಭಾಷಣವನ್ನು ಮಾಡಿದರು. ಅವರು ಇಲ್ಲಿಂದ ಎಲ್ಲಿಗೆ ಹೋದರು ಎನ್ನುವುದು ನಮಗೆ ತಿಳಿದುಬಂದಿಲ್ಲ. ಆದರೆ ಎರಡು ವಾರಗಳ ನಂತರ ಅವರು ಮಿನ್ನಿಯಾಪೊಲಿಸ್ ನಗರದಲ್ಲಿ ಕಾಣಿಸಿಕೊಳ್ಳುತ್ತಾರೆ. ಏರಿಯಲ್ ಎಂಬ ವಿದ್ಯಾರ್ಥಿ ಪತ್ರಿಕೆಯು ಮಿನ್ನೆಸೊಟಾ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿತ್ತು. ಈ ಪತ್ರಿಕೆಯ ಡಿಸೆಂಬರ್ ೯ರ ಸಂಚಿಕೆಯಲ್ಲಿ ಈ ಬಗ್ಗೆ ವರದಿಯನ್ನು ನಾವು ಕಾಣುತ್ತೇವೆ:

‘‘ಹಿಂದೂ ಸಂನ್ಯಾಸಿಯಾದ ಸ್ವಾಮಿ ವಿವೇಕಾನಂದರು ವಿಶ್ವಧರ್ಮ ಸಮ್ಮೇಳನದಲ್ಲಿ ಪ್ರಭಾವಶಾಲಿಯಾದ ವ್ಯಕ್ತಿತ್ವವಾಗಿದ್ದರು. ಅವರ ಮಾತುಗಳಲ್ಲಿ ಪ್ರಾಮಾಣಿಕತೆ ಎದ್ದುಕಾಣುತ್ತದೆ. ಅವರದು ಅಯಸ್ಕಾಂತದಂತೆ ಆಕರ್ಷಣೀಯ ವ್ಯಕ್ತಿತ್ವ. ಇದು ಅವರ ಭಾಷಣಗಳನ್ನು ಶ್ರದ್ಧೆಯಿಂದ ಆಲಿಸುವಂತೆ ಮಾಡುತ್ತದೆ. ಇದಲ್ಲದೆ, ‘ದಿವ್ಯಾನುಭೂತಿಯ ವಾಗ್ಮಿ’ ಎಂಬ ನಾಮಧೇಯವನ್ನು ಅವರಿಗೆ ನೀಡುತ್ತದೆ. ಇವರು ತಮ್ಮ ಚಿಂತನೆಯನ್ನು ಕತೆಗಳು ಮತ್ತು ಪ್ರಸಂಗಗಳ ಮೂಲಕ ಪರಿಣಾಮಕಾರಿಯಾಗಿ ವ್ಯಕ್ತಪಡಿಸುತ್ತಾರೆ. ಪೌರಸ್ತ್ಯ ಜಗತ್ತಿನ ದೃಶ್ಯಗಳಿಗೆ ಈ ಮೂಲಕ ಸಮೃದ್ಧಿಯನ್ನೂ ಮತ್ತು ವರ್ಣವೈವಿಧ್ಯವನ್ನೂ ಸ್ವಾಮಿ ವಿವೇಕಾನಂದರು ತುಂಬುತ್ತಾರೆ. ಅವರು ತಮ್ಮ ಸ್ವದೇಶೀಯ ಉಡುಪನ್ನು ಧರಿಸಿರುತ್ತಾರೆ. ಸುಂದರವಾದ ಪೇಟವನ್ನು ತಲೆಗೆ ಸುತ್ತಿಕೊಂಡಿದ್ದಾರೆ. ಅವರ ಮುಖಮಂಡಲವು ಪ್ರಭಾವಶಾಲಿಯಾದ ಬೌದ್ಧಿಕತೆಯನ್ನು ಹೊರಸೂಸುತ್ತಿತ್ತು. ಇವರ ಭಾಷಣದ ವಿಷಯಗಳು ಗಂಭೀರವಾಗಿದ್ದು, ಸಾಧಾರಣ ಜನರು ಅದರ ಕೆಲವು ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದೆ ಇರಬಹುದು. ಆದರೆ ಅವರು ಬೋಧಿಸುವ ತತ್ತ್ವಜ್ಞಾನವು ಗಭೀರ ಸತ್ಯವೆಂದು ನಮಗೆ ತಿಳಿದುಬರುವುದು.

‘‘ವಿವೇಕಾನಂದರು ಭಾರತದ ಸಂಪ್ರದಾಯ ಮತ್ತು ಕಟ್ಟುಪಾಡುಗಳ ಬಗ್ಗೆ ಮಾತನಾಡುತ್ತಾರೆ. ಪುರುಷರು ಮತ್ತು ಸ್ತ್ರೀಯರ ಬದುಕಿನ ನಡುವಿನ ವೈಪರೀತ್ಯವನ್ನು, ಸ್ತ್ರೀಯರ ಪಾವಿತ್ರ್ಯತೆಯನ್ನು ಹಾಗೂ ಮುಂದಿನ ದಿನಗಳಲ್ಲಿ ಅವರ ಸ್ಥಾನದಲ್ಲಿ ಉಂಟಾದ ಅವನತಿಯನ್ನು, ಭಾರತೀಯರ ಆಧ್ಯಾತ್ಮಿಕ ಶಾಂತ ಜೀವನವನ್ನು, ಇಷ್ಟಾದರೂ ಅದು ಬಂಧನದಿಂದ ಕೂಡಿದ್ದು, ಮುಕ್ತಸ್ಥಿತಿಯಲ್ಲವೆಂಬುದನ್ನೂ - ಅವರು ವಿವರಿಸುತ್ತಾರೆ. ಹಾಗೆಯೇ ಅವರು ಭಾರತೀಯ ಮುಸ್ಲಿಮರ ಬಗ್ಗೆ ಕೂಡ ಮಾತನಾಡುತ್ತಾರೆ. ಭಾರತದ ದೇಗುಲಗಳ ವೈಭವವನ್ನು, ಅಲ್ಲಿನ ವಿವಿಧ ಜನಾಂಗಗಳ ವೈಶಿಷ್ಟ್ಯವನ್ನು ಬಣ್ಣಿಸುತ್ತಾರೆ. ಒಬ್ಬ ಸಾಮಾನ್ಯ ರೈತನಲ್ಲಿಯೂ ಕಂಡುಬರುವ ಅತೀಂದ್ರಿಯ ಜ್ಞಾನವನ್ನು ಪ್ರಶಂಸಿಸುತ್ತಾರೆ. ಹಿಂದೂ ಜನರಿಗೆ ಗಂಗಾನದಿಯ ಬಗ್ಗೆ ಇರುವ ಭಕ್ತಿವಿಶ್ವಾಸವನ್ನು ವಿವರಿಸಿ ಹೇಳುತ್ತಾರೆ. ಇದರ ತಟದಲ್ಲಿ ಸಾಯುವ ಪ್ರತಿಯೊಬ್ಬ ಹಿಂದೂವಿನ ಬಯಕೆಯ ಬಗ್ಗೆ ತಿಳಿಹೇಳುತ್ತಾರೆ. ಅದೇ ರೀತಿ ಅಮೆರಿಕದ ಜನರ ಜೀವನಶೈಲಿಯ ಕೆಲವು ಅಂಶಗಳ ಬಗ್ಗೆ ನವಿರಾದ ಹಾಸ್ಯವನ್ನು ಕೂಡ ಮಾಡುತ್ತ, ಸಭಿಕ ಸಮುದಾಯದಲ್ಲಿ ನಗೆಯ ಅಲೆಗಳನ್ನು ಎಬ್ಬಿಸುತ್ತಾರೆ.’’

ಸ್ವಾಮಿ ವಿವೇಕಾನಂದರು ಜನವರಿ ೧೮೯೪ರ ಮಧ್ಯಭಾಗದವರೆಗೆ ಎಲ್ಲಿದ್ದರು, ಏನು ಮಾಡುತ್ತಿದ್ದರು ಎಂದು ನಮಗೆ ತಿಳಿದುಬಂದಿಲ್ಲ. ಆದರೆ ಡಿಸೆಂಬರ್ ೧೮೯೩ರ ಮಧ್ಯಭಾಗದಲ್ಲಿ ಅವರು ಮಿನ್ನಿಯಾಪೊಲಿಸ್‌ನಲ್ಲಿ ಮಿಂಚಿನಂತೆ ನಮಗೆ ಕಂಡುಬರುತ್ತಾರೆ. ಆ ಆರು ವಾರಗಳ ಅವಧಿಯಲ್ಲಿ ಅವರು ಖಂಡಿತವಾಗಲೂ ಅತ್ಯಂತ ಕ್ರಿಯಾಶೀಲರಾಗಿದ್ದರು. ಸಣ್ಣ ಮತ್ತು ದೊಡ್ಡ ಪಟ್ಟಣಗಳಲ್ಲಿ ಎಡೆಬಿಡದೆ ಸಂಚಾರ ಮಾಡುತ್ತ, ಪ್ರವಚನಗಳನ್ನು ನೀಡುತ್ತಿದ್ದರು. ಆದರೆ ಎಲ್ಲೆಲ್ಲಿಗೆ ಹೋಗಿದ್ದರು, ಯಾವ ಯಾವ ವಿಷಯಗಳ ಬಗ್ಗೆ ಮಾತನಾಡಿದರು ಎಂಬುದನ್ನು ಇನ್ನೂ ನಾವು ಸಂಶೋಧನೆ ಮಾಡಿ ತಿಳಿದುಕೊಳ್ಳಬೇಕಾಗಿದೆ. ಇದಕ್ಕಾಗಿ ಅನ್ವೇಷಣೆಗಳು ನಡೆಯುತ್ತಲೇ ಇವೆ. *(ಮುಂದುವರಿಯುವುದು)*